# ಕರಾವಳಿಯ ಜನಪದ ದೈವಾರಾಧನೆ : ಸಾಂಸ್ಕೃತಿಕ ಪಲ್ಲಟಗಳು

ಡಾ. ಚಂದ್ರಾವತಿ ಶೆಟ್ಟಿ
ಸಹ ಪ್ರಾಧ್ಯಾಪಕರು,
ಕನ್ನಡ ವಿಭಾಗ
ಶ್ರೀ ಶಾರದಾ ಕಾಲೇಜು, ಬಸ್ರೂರು

## I. INTRODUCTION

ಕರ್ನಾಟಕ ಕರಾವಳಿಗೆ ತನ್ನದೇ ಆದ ಸಾಂಸ್ಕೃತಿಕ ಅಸ್ಮಿತೆ ಇದೆ. ತುಳುನಾಡು ಎಂಬುದಾಗಿ ಜನಪ್ರಿಯವಾಗಿರುವ ಈ ಪ್ರದೇಶಕ್ಕೆ ಪರಶುರಾಮ ಸೃಷ್ಟಿಯ ತಾಣ ಎಂಬ ಪ್ರತೀತಿಯೂ ಇದೆ. ಕರ್ನಾಟಕದ ಇತರೆಡೆಗಳಿಗೆ ಹೋಲಿಸಿದರೆ ಕರಾವಳಿಯ ಪರಿಸರದಲ್ಲಿ ಗುರುತಿಸಬಹುದಾದ ಸಂಸ್ಕೃತಿಯ ಚಿತ್ತಾರ ವಿಶಿಷ್ಟವಾದದ್ದು. ಯಕ್ಷಗಾನ ಬುದ್ಧರಾಧನೆ ನಾಗಮಂಡಲ ಕಂಬಳ ಮೊದಲಾದ ಸಾಂಸ್ಕೃತಿಕ ಗುರುತುಗಳು ಇಲ್ಲಿನ ಜನಜೀವನದೊಂದಿಗೆ ಹಾಸುಹೊಕ್ಕಾಗಿ ಕರಾವಳಿ ಕರ್ನಾಟಕದ ಭೌಗೋಳಿಕ ಪರಿಸರವು ಕೃಷಿ ಸಂಸ್ಕೃತಿಯನ್ನು ಒಳಗೊಂಡಿತ್ತು. ಈ ಕೃಷಿ ಸಂಸ್ಕೃತಿಯ ಭಾಗವಾಗಿ ದೈವಗಳು ಆರಾಧನೆಗೆ ಒಳಪಡುತ್ತಿದ್ದವು.

ಕರಾವಳಿಯ ಜನಪದದವರು ತಮ್ಮ ಬದುಕಿನ ಸರ್ವಸ್ವಗಳಾದ ಆರಾಧ್ಯ ದೈವಗಳಾಗಿ ಕಲ್ಕುಡ ಕಲ್ಕುರಟಿ ,ಪಂಜುರ್ಲಿ, ಹುಲಿರಾಯ ಹಾಯ್ ಗೂಳಿ, ಚಿಕ್ಕಮ್ಮ ಬೊಬ್ಬರ್ಯ ಮೊದಲಾಗಿ ಅನೇಕ ದೈವ ಶಕ್ತಿಗಳನ್ನು ಪೂಜಿಸುತ್ತಿದ್ದರು. ಈ ದೈವಗಳಲ್ಲಿ ಹೆಚ್ಚಿನವುಗಳನ್ನು ತಮ್ಮ ಮನೆಯ ಚಾವಡಿಯ ಗೋಡೆ ಮೇಲೆ ಇರಿಸಿರುವ ಹಲಗೆಯಲ್ಲಿ ಖಡ್ಗ ಪೂಜೆಯಲ್ಲಿ ಸಾಂಕೇತಿಕವಾಗಿ ನಂಬಿಕೊಂಡು ಬರುತ್ತಿದ್ದರು .ಈ ದೈವಗಳಲ್ಲಿ ಕೆಲವು ಈಶ್ವರನ ಗಣಗಳಾದರೆ ,ಕೆಲವು ಪ್ರಾಣಿ ದೈವಗಳು . ಉಳಿದಂತೆ ಕೂಡು ಕುಟುಂಬದಲ್ಲಿ ಹುಟ್ಟಿ ಬೆಳೆದು ಸಮಾಜದ ಒಳಿತಿಗಾಗಿ ಸಮಾಜ ಕಂಠಕರಾದ ದುಷ್ಟ ಶಕ್ತಿಗಳನ್ನು ಗಮನಿಸಲು ಪರಾಕ್ರಮದಿಂದ ಹೋರಾಡಿ ಮಡಿದು ಅಮರರಾದವರು. ಕೆಲವರು ದೈವಗಳಿಗೆ ಹನಿಯಾರ ಸೇವೆ , ವರ್ಷಾವಧಿ ಭೋಗ, ಕಾಲಕಾಲದಲ್ಲಿ ಕೋಲಾ ನಿಯಮ ಮೊದಲಾದ ಉತ್ಸವಗಳು ನಡೆಯುತ್ತಿತ್ತು.

ಮನುಷ್ಯನ ಬದುಕು ನಿತ್ಯ ಪರಿವರ್ತನಾಶೀಲವಾದದ್ದು. ಸಂಸ್ಕೃತೀಕರಣ, ಜಾಗತೀಕರಣ ಆಧುನಿಕತೆ ಮೊದಲಾದ ಪ್ರಕ್ರಿಯೆಗಳು ಕಾಲಕಾಲಕ್ಕೆ ಜನಪದ ಕಲೆ ಮತ್ತು ಆರಾಧನೆಯ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು .ವರ್ತಮಾನದ ಜಾಗತಿಕ ಸಾಮ್ರಾಜ್ಯಶಾಹಿ ವಿದ್ಯಮಾನವಾದ ಮಾರುಕಟ್ಟೆ ಕೇಂದ್ರಿತ ಜಾಗತೀಕರಣವು ವಿಶ್ವವನ್ನೇ ಏಕ ಮಾದರಿಯ ಮೊಹಲ್ಲನ್ನಾಗಿ ಕಟ್ಟುವ ಹುನ್ನಾರವನ್ನು ಹೂಡುತಿದೆ .ಈ ಜಾಗತೀಕರಣವೆಂಬ ಮೊಹಲ್ಲಾದಲ್ಲಿ ನಮ್ಮ ಬಹು ಸಂಸ್ಕೃತಿ ಭಾಷೆ ನಂಬಿಕೆ  ನಡವಳಿಕೆ ಆಚರಣೆ ಆರಾಧನೆಗಳು ಬೇರು ಕಿತ್ತ ಕೊತ್ತಂಬರಿ ಸೊಪ್ಪಿನಂತೆ ಮೂರು ಕಾಸಿಗೆ ಬಿಕರಿಯಾಗುತ್ತಿದೆ. ಅಭಿವೃದ್ಧಿಯೆಂಬ ಮಂತ್ರ ಜಪಿಸುವ ಪಕ್ಕ ಗೋಸುಂಬೆತನದ ಜಾಗತೀಕರಣದ ವರ್ತಮಾನದ ವಿರಾಟ ದರ್ಶನದ ಎದುರು ದೇಶಿ ಸಮಾಜಗಳು ತಮ್ಮ ಚಹರೆಯನ್ನು ಹುಡುಕುವ ಸಂದಿಗ್ಧವನ್ನು ಎದುರಿಸುತ್ತಿವೆ. ಅಂದರೆ ವರ್ತಮಾನದಲ್ಲಿ ನಿರೂಪಣೆಗೆ ಒಳಪಡುವ ಯಾವುದೇ ಸಂಗತಿಯೂ ಸಹ ತನ್ನಿಂದ ತಾನೇ ಒಂದು ಜಾಗತಿಕ ವಿದ್ಯಮಾನದ ಜೊತೆ ತಳುಕು ಹಾಕಿಕೊಂಡಿರುತ್ತದೆ. ಈ ಹಿನ್ನೆಲೆಯ ನಿಟ್ಟುಕೊಂಡು ದೈವರಾದನೆಯ ಪಲ್ಲಟಗಳನ್ನು ದೇಸಿ ಸಮಾಜದ ಪಲ್ಲಟದ ಭಾಗವಾಗಿಯೇ ನಿರೂಪಿಸುವ ಪ್ರಯತ್ನ ಮಾಡಬೇಕಾಗಿದೆ.

ದೈವರಾದನೆಯಲ್ಲಿ ಪಲ್ಲಟ ಎನ್ನುವುದು ಮೇಲ್ನೋಟಕ್ಕೆ ಚಲನಶೀಲವಾದ ಬದುಕಿನ ಗತಿಯ ಜೊತೆಗೆ ಕಾಲ ದೇಶದ ಪರಿಧಿಯಲ್ಲಿ ಬದಲಾವಣೆಗೆ ಒಳಗಾಗುತ್ತದೆ. ಬಹುಶಃ ಆರಾಧನೆಯ ವಿನ್ಯಾಸದಲ್ಲಿ ಜರುಗುವ ಪಲ್ಲಟಗಳು ತನ್ನಿಂದ ತಾನೇ ನಾಡನ್ನು ಮರು ನಿರೂಪಿಸುವ ಕಥನವಾಗಿಯೂ ಮಾರ್ಪಡುತ್ತದೆ. ಇಲ್ಲಿ ಪಲ್ಲಟ ಎನ್ನುವುದು ಎರಡು ಕಾರಣಗಳಿಗಾಗಿ ನಡೆಯುತ್ತದೆ ಒಂದು ಆಂತರಿಕ ಒತ್ತಡ ಇನ್ನೊಂದು ಹೊರಗಿನ ವಿದ್ಯಮಾನಗಳ ಪ್ರಭಾವ .ಕರಾವಳಿ ಪ್ರದೇಶದಲ್ಲಿ ಬಲಿಷ್ಠರಾದ ವೈದಿಕರು ಜನಪದ ದೈವರಾದನೆಯ ಮೇಲೆ ಪ್ರಭಾವ ಬೀರಿದರು. ಇದಕ್ಕೆ ಪೂರಕವಾಗಿ ವೈದಿಕ ಸಂಪ್ರದಾಯದ ಮೇಲೆ ವಿಶೇಷ ಆಕರ್ಷಿತರಾಗಿ ತಮ್ಮ ಮೂಲ ಆಚರಣೆಯಲ್ಲಿದ್ದ ಒಳಿತನ್ನು ಸಂಪೂರ್ಣ ಮರೆತು ಕಡೆಗಣಿಸಿದರು. ತಮ್ಮ ಹಿರಿಯರ ಕಾಲದಿಂದ ಮನೆತನದಲ್ಲಿ ಪೂಜಿಸುತ್ತಿದ್ದ ದೈವಗಳ ಹೆಸರು ಮತ್ತು ಸಂಖ್ಯೆಯನ್ನು ಮರೆಯಲಾರಂಭಿಸಿದರು. ವೈದಿಕ ಪುರೋಹಿತರು ನಿರ್ಧರಿಸಿದಂತೆ ದೈವಗಳು ಪುನರ್ ನಾಮಕರಣಗೊಂಡವು. ಒಂದೇ ಮಂಚದಲ್ಲಿ ಪೂಜೆ ಪಡೆಯುತ್ತಿದ್ದ ದೈವಗಳನ್ನು ನವನವೀನ ರೀತಿಯ ಶಿಲ್ಪಕಲಾ ವಿನ್ಯಾಸದ ಮನೆ ಮಂಚಗಳಲ್ಲಿ ಪೂಜಿಸ ತೊಡಗಿದರು. ಕೂಡು ಕುಟುಂಬದ ಮನೆಯೊಳಗೆ ಸುಖದಿಂದ ವಿಶ್ರಾಂತಿ ಪಡೆಯುತ್ತಿದ್ದ ಮಣೆ ದೈವಗಳನ್ನು, ಬಲತ್ಕಾರದಿಂದ ಮನೆ ಬಿಟ್ಟು ಅಂಗಳದಲ್ಲಿ ಸುಂದರ ಗುಡಿಗಳಲ್ಲಿ ಆರಾಧಿಸುವಂತೆ ಪ್ರೇರೇಪಿಸ ತೊಡಗಿದರು.

ಆಧುನಿಕತೆಯ ಪ್ರವೇಶದಿಂದಾಗಿ ಕನ್ನಡ ನಾಡಿನ ಜನರು ಶಿಕ್ಷಣ, ಪತ್ರಿಕೆ ,ಪತ್ರಿಕೋದ್ಯಮ, ಹೋಟೆಲ್ ಉದ್ಯಮ ಮೊದಲಾದವುಗಳಿಗೆ ತೆರೆದುಕೊಂಡರು. ಇದರಿಂದಾಗಿ ಕರಾವಳಿ ಜನಪದಲ್ಲೂ ಬದಲಾವಣೆ ಕಾಣಿಸಿಕೊಂಡಿದ್ದು. ಬಹುಶಃ ಇಲ್ಲಿ ಒಳಗಿನ ಒತ್ತಡ ಮತ್ತು ಹೊರಗಿನ ಪ್ರಭಾವ ಜನಪದ ಆರಾಧನೆಯಲ್ಲಿ ಪಲ್ಲಟದ ಬೀಜವನ್ನು ಬಿತ್ತಿತು ಎಂದು ಹೇಳಬಹುದು. ಕರಾವಳಿಯ ಗದ್ದೆ ಬಯಲುಗಳ ಪ್ರಕೃತಿಯ ಮನೋಹರ ಪರಿಸರದಲ್ಲಿ ದೇವಟಿಕೆಯ ಬೆಳಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ದೊರೆಯುತ್ತಿದ್ದ ಸರಳ ವಸ್ತುಗಳನ್ನು ಉಪಯೋಗಿಸಿ ನಡೆಯುತ್ತಿದ್ದ ಕೋಲಾ ನೇಮಗಳ ಸೊಬಗು ವರ್ಣಿಸಲು

ಅಸಾಧ್ಯ ಅದೇ ಕೋಲಾ ನೇಮಗಳು ಸುಂದರ ಮಂಟಪಗಳಲ್ಲಿ ವಿದ್ಯುತ್ ದ್ವೀಪಗಳ ಅಲಂಕಾರಗಳಲ್ಲಿ ವಿಡಿಯೋ ಭಾವಚಿತ್ರಗಳ ಸಂಭ್ರಮದಲ್ಲಿ ವೈಭವೀಕರಣಗೊಂಡಿರುವುದು.

ಜಾಗತೀಕರಣದ ಆರ್ಥಿಕ ಸಾಮಾಜಿಕ ಸ್ಥಿತಿ ಯಂತ್ರಗಳಿಂದಾಗಿ ಸಂಘ ಸಂಸ್ಥೆಗಳು ಹುಟ್ಟಿಕೊಂಡು ಸಮುದಾಯದ ಗುರಿಕಾರ ಯಜಮಾನ ಕೇಂದ್ರಿತ ವ್ಯವಸ್ಥೆಯಿಂದ ಸಂಘ ಸಂಸ್ಥೆಗಳ ಪದಾಧಿಕಾರಿಗಳ ಕಡೆಗೆ ದೈವರಾಧನೆ ಪಲ್ಲಟಗೊಂಡಿದೆ .ದೈವರಾದನೆಯ ಮೂಲಕ ಕರಾವಳಿಯ ಜನಪದರು ಕಟ್ಟಿಕೊಂಡ ಭಾವನಾತ್ಮಕ ವ್ಯವಸ್ಥೆ ಮುರಿದುಬಿದ್ದು ವ್ಯವಹಾರಿಕ ಜಗತ್ತು ಆರಾಧನಾ ಜಗತ್ತನ್ನು ಕಂಡುಕೊಳ್ಳುವ ಹುನ್ನಾರ ನಡೆಯುತ್ತದೆ .ಕರಾವಳಿಯ ಜನಪದರು ಬಹಳ ಸರಳವಾಗಿ ನಡೆಸುತ್ತಿದ್ದ ದೈವಾರಾಧನೆ ದರ್ಶನಾವೇಶ ,ನುಡಿಕಟ್ಟಿನ ಅಭಯ ಕ್ರಮೇಣ ಕಾಟಾಚಾರಕ್ಕೆ ಎಂಬಂತೆ ನಡೆಯತೊಡಗಿದವು. ಆರೂಢ ಪ್ರಶ್ನೆ, ತಾಂಬೂಲ ಪ್ರಶ್ನೆ ,ಸ್ವರ್ಣ ಪ್ರಶ್ನೆ ಅಷ್ಟಮಂಗಳ ದೈವಗಳ ಗುರಿ ಗೋಪುರಗಳ ನವೀಕರಣ ಪುನರ್ ಪ್ರತಿಷ್ಠೆ ಬ್ರಹ್ಮ ಕಳಸದಿಂದ ರಾರಾಜಿಸಿದವು ಮೊನ್ನೆ ಮೊನ್ನೆಯವರೆಗೆ ತನು, ತಂಬಿಲ, ಡಮರು ಸೇವೆಗೆ ತೃಪ್ತಿಗೊಳುತ್ತಿದ್ದ ನಾಗ ಇಂದಿನ ದಿನಗಳಲ್ಲಿ ನಾಗಮಂಡಲಗಳು ನರ್ತನ ಸೇವೆಯಲ್ಲಿ ತೊಡಗಿರುವ ವೈದ್ಯರೆಂಬ ಪಂಗಡದವರ ಅಟ್ಟಹಾಸದ ರಂಗಭೂಮಿಯಾಗಿ ಲಾಭಗಳಿಸುವ ಉದ್ದಿಮೆಗಳಾಗಿ ಬೆಳೆಯಿತು.

ಕರಾವಳಿಯ ಜನಪದ ಮೂಲದ ದೈವಾರಾಧನೆ ದೈವಗಳ ಸನ್ನಿಧಿಯಲ್ಲಿ ಅಂದು ಭಯ ಭಕ್ತಿ ಗೌರವದಿಂದ ನಡೆಯುತ್ತಿದೆ ಇಂತಹ ಜನಪದ ಗಂಭೀರವಾದ ಸ್ವರೂಪದ ದೈವರಾಧನೆಯನ್ನು ಬರೆ ಮನರಂಜನೆಗೆ ಉಪಯೋಗಿಸುವುದು ಊರಿನ ಉತ್ಸವಗಳಲ್ಲಿ ದೈವಗಳ ವೇಷಧರಿಸಿ ತಟ್ಟಿರಾಯನಂತೆ ಕುಣಿಸುವುದು ಎಷ್ಟು ಸರಿ ಅಲ್ಲದೆ ಜನಪದ ಆರಾಧನೆಯ ದೇವಯರೆಲ್ಲ ವೈದಿಕ ಸಂಪ್ರದಾಯದ ಕೀಲು ಗೊಂಬೆಗಳಾಗಿ ಸಂಸ್ಕೃತಿಕರಣದ ಹೊಸ ರೂಪ ತಾಳುತ್ತಿದ್ದಾವೆ. ದೈವತ್ವದಿಂದ ದೇವತ್ವಕ್ಕೆ ಬರ್ತಿ ಹೊಂದುತ್ತಿದ್ದಾವೆ, ಜನಪದ ರಲ್ಲಿ ಆರಾಧನೆಗೊಳ್ಳುತ್ತಿರುವ ಚಿಕ್ಕಮ್ಮ ದೈವ ಚಕ್ರೇಶ್ವರ ಎನ್ನುವ ಹೆಸರು ಪಡೆದು ವೈಭವೀಕರಣಗೊಂಡರೆ ತುಳುವಿನಿಂದ ವಲಸೆ ಬಂದ ಅಬ್ಬಕ್ಕ ದಾರಕರು ಅರ್ಬಕೇಶ್ವರಿ ತಾರಕೇಶ್ವರಿಯನ್ನು ರೂಪ ತಾಳಿದ್ದಾರೆ ಮಾರಿ ಅಮ್ಮ ಮಹಾದೇವಿಯಾಗಿದ್ದಾರೆ ಕಾಡ್ತಿಯಮ್ಮ ಕಾರ್ತಿಯೇಶ್ವರಿಯಾಗಿದ್ದಾಳೆ ಬೊಬ್ಬರ್ಯ ಗರ್ಭನಿಕನಾಗಿ ನೀಚ ದೈವ ನಿಜೇಶ್ವರನಾಗಿ ಬದಲಾಗಿದ್ದಾರೆ ಹೀಗೆ ದೈವಗಳ ಮೂಲ ಸ್ವರೂಪವೇ ಬದಲಾವಣೆ ಹೊಂದಿ, ಆರಾಧನೆ ಪದ್ಧತಿಗಳು ಹೊಸ ಹೊಸ ರೂಪ ತಾಳುವ ಸಾಧ್ಯತೆಗಳಿವೆ.

ಶೈಕ್ಷಣಿಕ ಕ್ಷೇತ್ರದಲ್ಲಿ ವಿಚಾರವಂತರು ಶ್ರದ್ಧಾ ಭಕ್ತಿಯ ಆಧಾರವಾಗಿದ್ದ ದೈವಾರಾಧನೆ ಕುರಿತಾಗಿ ಗಂಭೀರವಾಗಿ ಚಿಂತನೆ ನಡೆಸುವ ಆ ಮೂಲಕ ಎಳೆಯ ತಲೆಮಾರಿನವರಿಗೆ ಅರಿವು ಮೂಡಿಸುವ ಅವಶ್ಯಕತೆ ಇರುವುದು ಕರಾವಳಿ ಜನಪದ ಮನೆ ಮಂಚದಲ್ಲಿ ಸೋದರ ಮಾವನ ಸಂಬಂಧದ ಭಾವನಾತ್ಮಕ ದೈವಗಳು ಕರೆದಾಗ ಓಗುಡುತ್ತಿದ್ದವು ಅವು ಇಂದು ಸಂಪೂರ್ಣ ಮೌನಕ್ಕೆ ಶರಣಾಗಬೇಕಿದ್ದರೆ ನಮ್ಮ ಸಂಸ್ಕೃತಿಯಲ್ಲಿ ಆರಾಧನೆಯ ಕುರಿತಾದ ಸ್ಥಿತ್ಯಂತರದ ಬಗೆಗಿನ ಗಂಭೀರವಾದ ಅಧ್ಯಯನ ವಿಚಾರ ಮಂಥನಗಳು ನಡೆಯಬೇಕಾಗಿದೆ.

ಗ್ರಂಥ ಋಣ

೧.) ಕರಾವಳಿಯ ಆಚರಣೆಗಳು ಭಾಗ – 1
ಲೇಖಕರು : ವಾಮನ ನಂದಾವರ
ಪ್ರಕಟಣೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು – 2014

2) ಜಾನಪದ ಲೇಖನ ಸಂಚಯ
ಲೇಖಕರು : ಡಾ. ಜಿ. ಆರ್ ತಿಪ್ಪೇಸ್ವಾಮಿ
ಪ್ರಕಟಣೆ : ಜಾನಪದ ಪ್ರಕಾಶನ
ಹೊನ್ನಾವರ – 2005.